ಉಪಾಧ್ಯಕ್ಷರು : ಆಮೇಲೆ ಈ ವಿಷಯವನ್ನು ಪ್ರಸ್ತಾಪ ಮಾಡಿ ಈಗ ವಾಟಾಳನಾಗರಾಜರವರು ಪ್ರಸ್ತಾಪ ಮಾಡಲಿ.

ಮಂತ್ರಿಗಳ ಹೇಳಿಕೆಗಳು

(ಅ) ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಬೆಂಕಿ.

ಶ್ರೀ ವಾಟಾಳ್ ನಾಗರಾಜ್ : ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಬೆಂಕಿ ಬಿದ್ದುದರ ಬಗ್ಗೆ ಸಚಿವರ ಹೇಳಿಕೆಯನ್ನು ಕೊಡಿಸಿ.

+ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ದಿನಾಂಕ : 28-02-1996ರಂದು ಶೂನ್ಯ ವೇಳೆಯಲ್ಲಿ ಚಾಮರಾಜನಗರ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ವಾಟಾಳ್ ನಾಗರಾಜ್‌ರವರು ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಬೆಂಕಿ ಸಂಭವಿಸಿರುವ ಬಗ್ಗೆ ಪ್ರಸ್ತಾಪಿಸಿರುವ ಬಗ್ಗೆ ಕೆಳಕಂಡಂತೆ ಹೇಳಿಕೆಯನ್ನು ಸದನದ ಮುಂದೆ ಇಡಲು ಬಯಸುತ್ತೇನೆ.

1996 ಫೆಬ್ರವರಿ ಮೊದಲನೆ ವಾರದಿಂದ ಪ್ರಾರಂಭವಾದ ಸಣ್ಣಪುಟ್ಟ ನೆಲಬೆಂಕಿಯ ಬಗ್ಗೆ ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದು, ಈ ಸಣ್ಣಪುಟ್ಟ ನೆಲ ಬೆಂಕಿಯಿಂದಾಗಿ ಯಾವುದೇ ಮರಗಳಿಗೆಹಾನಿಯಾಗಿರುವುದಿಲ್ಲ. ಈ ಅಭಯಾರಣ್ಯವು 64,300 ಹೆಕ್ಟೇರ್ ಪ್ರದೇಶವಿದ್ದು, ಅಲ್ಲಲ್ಲಿ ಸಣ್ಣಪುಟ್ಟ ನೆಲಬೆಂಕಿ ಕಾಣಿಸಿಕೊಂಡ ಕೂಡಲೇ ಎಲ್ಲಾ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಲಾಗಿರುತ್ತದೆ. ಈ ಅರಣ್ಯದಲ್ಲಿ ಇರುವ ಮರಗಿಡಗಳಿಂದ ಬೇಸಿಗೆಯ ಸಮಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒಣಗಿದ ಎಲೆಗಳು ಉದುರುವುದಿದ್ದು, ಆಕಸ್ಮಿಕವಾಗಿ ಬೆಂಕಿ ಬೀಳುವ ಸಂಭವವಿರುತ್ತಿದ್ದು, ನೆಲ ಬೆಂಕಿಯಿಂದಾಗಿ ಯಾವುದೇ ಮರಗಳಿಗೆ ಮತ್ತು ಪ್ರಾಣಿಗಳಿಗೆ ಹಾನಿಯಾಗಿರುವುದಿಲ್ಲ. ಸಾಮಾನ್ಯವಾಗಿ ಈ ನೆಲ ಬೆಂಕಿಯು ಕಾಡಿನ ಹೊರ ಆವರಣದಲ್ಲಿ ಕಾಣಿಸಿಕೊಂಡಿರುತ್ತದೆ. ಅಭಯಾರಣ್ಯದ ಮುಖ್ಯ ಪ್ರದೇಶ (ಕೋರಏರಿಯಾ)ದಲ್ಲಿ ಯಾವುದೇ ಬೆಂಕಿ ಸಂಭವಿಸಿರುವುದಿಲ್ಲ. ಕಾಡಿನ ಬೆಂಕಿಯನ್ನು ಯಶಸ್ವಿಯಾಗಿ ತಡೆಗಟ್ಟಲು ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

(1) ಉದ್ಯಾನವನದ ರಸ್ತೆಯ ಎರಡೂ ಬದಿಯಲ್ಲಿ ಬಿದ್ದಿರುವ ಒಣಕಡ್ಡಿ ಮತ್ತು ಒಣಗಿದ ಮರದ ಎಲೆಗಳನ್ನು ಸುಟ್ಟುಹಾಕಿ ಬೆಂಕಿ ಮಾಡಲಾಗಿರುತ್ತದೆ. ಈ ಕ್ರಮದಿಂದ ಆಕಸ್ಮಿಕವಾಗಿ ಸಂಭವಿಸಬಹುದಾದ ಬೆಂಕಿಯನ್ನು ತಡೆಗಟ್ಟಲಾಗಿದೆ.

(2) ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಅಂಥ ಪ್ರದೇಶಗಳಲ್ಲಿ ಬೆಂಕಿಯನ್ನು ತಡೆಗಟ್ಟುವ ಸಲುವಾಗಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗಿರುತ್ತದೆ. ಈ ವೀಕ್ಷಣಾ ಗೋಪುರಗಳ ನಿರ್ವಹಣೆಗಾಗಿ ನಿಯೋಜಿಸಿರುವ ಸಿಬ್ಬಂದಿಗಳಿಗೆ ವಾಕೀ-ಟಾಕಿ ವ್ಯವಸ್ಥೆಯನ್ನು ಮಾಡಲಾಗಿದ್ದು, ಬೆಂಕಿ ಕಾಣಿಸಿಕೊಂಡ ಕೂಡಲೇ ಈ ಸಿಬ್ಬಂದಿಯವರು ವಾಕಿ-ಟಾಕಿ ಮೂಲಕ ಸಂಚಾರಿ ಜಾಗೃತ ದಳದವರಿಗೆ ವರದಿಯನ್ನು ರವಾನಿಸಿ ಈ ಸಂಚಾರಿ ದಳಗಳು ಕೂಡಲೇ ಅಂಥ ಸ್ಥಳಗಳಿಗೆ ಧಾವಿಸಿ ಎಲ್ಲ ಕ್ರಮಗಳನ್ನು ಜರುಗಿಸಿ ಬೆಂಕಿಯನ್ನು ಆರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

(3) ಅಭಯಾರಣ್ಯದ ಒಳಗೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ವಾಸಿಸುತ್ತಿರುವ ಗಿರಿಜನರನ್ನು ಫೈರ ವಾಚರ್ಸಗಳನ್ನಾಗಿ ನೇಮಿಸಿದ್ದು ಈ ಗಿರಿಜನರು ನಮ್ಮಸಿಬ್ಬಂದಿಯವರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿರುವುದರಿಂದ ಆಕಸ್ಮಿಕವಾಗಿ ಹಾಗೂ ಉದ್ದೇಶಪೂರ್ವಕವಾಗಿ ಆಗುವ ನೆಲ ಬೆಂಕಿಯನ್ನು ಕೂಡಲೇ ನಂದಿಸಲು ಸಹಾಯಕರಾಗಿರುತ್ತಾರೆ.

(4) ಹೆಚ್ಚಿನ ವಾಹನಗಳನ್ನು ಬೆಂಕಿ ಕಾಲದಲ್ಲಿ ಅರಣ್ಯ ಸಿಬ್ಬಂದಿಯವರಿಗೆ ಮುಂಜಾಗ್ರತಾ ಕ್ರಮಕ್ಕಾಗಿ ನಿಯೋಜಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ 64,300 ಹೆಕ್ಟೇರ ಪ್ರದೇಶವಿರುವ ನಾಗರಹೊಳೆ ಅಭಯಾರಣ್ಯದ ಎಚ್.ಡಿ. ಕೋಟೆಯ ಪ್ರದೇಶದಲ್ಲಿ ಅಲ್ಲಲ್ಲಿ ನೆಲ ಬೆಂಕಿಯಾಗಿರುತ್ತದೆ. ನೆಲ ಬೆಂಕಿಯಾದ ಪ್ರದೇಶದಲ್ಲಿ ಮರಗಳಿಗಾಗಲೀ ಅಥವಾ ವನ್ಯಪ್ರಾಣಿಗಳಿಗಾಲೀ ನಷ್ಟ ಉಂಟಾಗಿರುವುದಿಲ್ಲ.

ಈ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದರಿಂದ ಹೆಚ್ಚಿನ ಹಾನಿಯಾಗಿಲ್ಲದೆ ಇದ್ದು, ಸ್ಥಳಗಳಲ್ಲಿ ಸಣ್ಣಪುಟ್ಟ ಪ್ರಮಾಣದ ನೆಲಬೆಂಕಿಯು ಸಂಭವಿಸಿರುತ್ತದೆ. ಯಾವುದೇ ಮರಗಳಿಗೆ ಅಥವಾ ಪ್ರಾಣಿಗಳಿಗೆ ಹಾನಿಯಾಗಿರುವುದಿಲ್ಲ. ಅಭಯಾರಣ್ಯದ ಮುಖ್ಯ ಆವರಣ (ಕೋರಏರಿಯಾ)ದಲ್ಲಿ ಯಾವುದೇ ಬೆಂಕಿ ಸಂಭವಿಸಿರುವುದಿಲ್ಲ. ಈ ಬೇಸಿಗೆಯ ದಿವಸಗಳಲ್ಲಿ ಸ್ವಾಭಾವಿಕವಾಗಿ ಹಾಗೂ ಉದ್ದೇಶಪೂರ್ವಕವಾಗಿ ಸಂಭವಿಸುವ ಈ ಬೆಂಕಿಯನ್ನು ತಡೆಗಟ್ಟಲು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಈ ಉತ್ತರದಲ್ಲಿ 'ಸುಟ್ಟು ಹಾಕಿ ಬೆಂಕಿ ರೈಲು ಮಾಡಲಾಗಿರುತ್ತದೆ' ಎಂದು ಇದೆ. ಬೆಂಕಿ ರೈಲು ಯಾವುದು?

ಒಬ್ಬ ಮಾನ್ಯ ಸದಸ್ಯರು : ಬೆಂಕಿ ರೈಲ್ ಅಲ್ಲ, ಅದು ಬೆಂಕಿ ಲೈನು ಇದರಲ್ಲಿ ಬೆರಳಚ್ಚು ತಪ್ಪಾಗಿದೆಯಷ್ಟೆ.

ಉಪಾಧ್ಯಕ್ಷರು : ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ಮಾನ್ಯ ಗೋವಿಂದೇಗೌಡರು ಹೇಳಿಕೆಯನ್ನು ಕೊಡಬೇಕು.

(ಆ) ಮಲೆನಾಡು ಪ್ರದೇಶಾಭಿವೃದ್ಧಿ ಹಾಗೂ ಹೈದರಾಬಾದ್ ಡೆವೆಲಪಮೆಂಟ್ ಬೋರ್ಡ್ ಕುರಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಗೋವಿಂದೇಗೌಡರು ದಯವಿಟ್ಟು ತಮ್ಮ ಹೇಳಿಕೆಯನ್ನು ಕೊಡಬೇಕು.

+ ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ನಿಯಮಗಳ ಪ್ರಕಾರ ಮಂಡಳಿಯು ತನ್ನ ಹಣ ಖರ್ಚು ಮಾಡಬೇಕಾದಲ್ಲಿ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪತ್ರ ಇಲಾಖೆ ಮುಖಾಂತರ ಬಿಡುಗಡೆ ಮಾಡಬೇಕಾಗಿದೆ. ಇದರಿಂದ